ಜಿ	ಶ್ರೀ ದಯಾನಂದ ರಾವ್ ಬಿರಾದಾರ್, ವಕೀಲರು, ಹುಮ್ನಾಬಾದ, ಬೀದರ್ ಜಿಲ್ಲೆ.	ಸದಸ್ಯರು
ಟಿ	ಶ್ರೀ ಶಂಕರ ಸಿಂದೋರ್, ಜಮಖಂಡಿ, ಬಿಜಾಪುರ ಜಿಲ್ಲೆ.	,,
ಪಿ	ಶ್ರೀ ದಿವಾಕರ್, ಡಿ. ಸಿ. ನರಸಿಂಹರಾಜಪುರ, ಚಿಕ್ಕಮಗಳೂರು ಜಿಲ್ಲೆ.	,,
ರ	ಶ್ರೀ ಮಜೀದ್ ಖಾನ್, ಪುಮಾಲಿ ಎಸ್ಟೇಟ್, ವಿರಾಜಪೇಟೆ, ಕೊಡಗು ಜಿಲ್ಲೆ.	,,
ಕ	ಶ್ರೀ ಟಿ. ಮುನಿಯಪ್ಪ, ಬಿ. ಎಸ್‌ಸಿ, ಬಿ. ಎಲ್., ಅತ್ತಿವಾಟ ದಾಸರಹಳ್ಳಿ ಪೋಸ್ಟ್, ಹೊಸಕೋಟೆ ತಾಲ್ಲೂಕು, ಬೆಂಗಳೂರು ಜಿಲ್ಲೆ.	,,

ಇಲಾಖೆಗಳೂ ಹಾಗೂ ಸರ್ಕಾರೀ ಉದ್ದಿಮೆಗಳಿಗಾಗಿ ಬೆಂಗಳೂರಿನಲ್ಲಿ ಖಾಸಗೀ ಕಟ್ಟಡಗಳಿಗೆ ಬಾಡಿಗೆಯ ವಿಚಾರ–

೧೯೮ ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಲೋಕೋಪಯೋಗಿ, ಕಾಡಾ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದಲ್ಲಿ, ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿರುವ ರಾಜ್ಯ ವಿವಿಧ ಇಲಾಖೆಗಳ ವಿವಿಧ ಸರ್ಕಾರಿ ಸ್ವಾಮ್ಯದ ನಿಗಮಗಳ, ಕಛೇರಿಗಳಿಗಾಗಿ ನೀಡುತ್ತಿರುವ ಬಾಡಿಗೆ ಮೊತ್ತವೆಷ್ಟು ?

ಆ) ಬಾಡಿಗೆ ನಿಯಂತ್ರಣದ ಕಾಯಿದೆಯ ನಿಯಮಗಳಿಗನುಸಾರ, ಈ ಬಾಡಿಗೆ ಮೊತ್ತವನ್ನು ನೀಡಲಾಗುತ್ತಿದೆಯೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮಂತ್ರಿ ಮತ್ತು ನೀರಾವರಿ ಸಚಿವರು).—

ಅ) ಎ) ರಾಜ್ಯ ಇಲಾಖೆಗಳಿಗೆ ಸಂಬಂಧಿಸಿದ ಕಾರ್ಯಾಲಯಗಳಿಗಾಗಿ ನಿರ್ಧರಿಸಲಾಗಿರುವ ಮಾಹೆಯಾನ ಬಾಡಿಗೆ ಮೊತ್ತ ರೂ.೮,೪೬,೫೬೨ (ಎಂಟು ಲಕ್ಷದ ನಲವತ್ತಾರು ಸಾವಿರದ ಮೂರು ನೂರ ತೊಂಬತ್ತೆರಡು) ರೂಪಾಯೀಗಳು,

ಬಿ) ಸರ್ಕಾರೀ ಅಂಡರ್ ಟೇಕಿಂಗ್ಸ್‌ನ ಕಛೇರಿಗಳ ಬಾಡಿಗೆ ರೂ. ೯,೩೦, ೭೩೧–೨೭ (ಒಂಬತ್ತು ಲಕ್ಷದ ಮೂವತ್ತು ಸಾವಿರದ ಏಳುನೂರ ಮೂವತ್ತು ಒಂದು ಮಂತ್ರು ಇಪ್ಪತ್ತೇಳು ಪೈಸೆಗಳು ಮಾತ್ರ)

ಆ) ಬಹುತೇಕ ಕಟ್ಟಡಗಳಿಗೆ ಲೋಕೋಪಯೋಗಿ ಇಲಾಖಾ ನಿಯಮಗಳನ್ವಯ ಬಾಡಿಗೆ ನಿರ್ಧರಿಸಲಾಗಿದೆ.

ಪೋಲೀಸ್ ಮೊಕದ್ದಮೆಗಳ ಬಗ್ಗೆ

೧೯೫ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರದವರು ಹಿಂತೆಗೆದುಕೊಂಡಿರುವ ಪೋಲೀಸ್ ಮೊಕದ್ದಮೆಗಳ ಸಂಖ್ಯೆ ಎಷ್ಟು (ನಿರ್ದಿಷ್ಟ ಪ್ರಕರಣಗಳ ಪ್ರತ್ಯೇಕ ವಿವರಗಳನ್ನು ಒದಗಿಸುವುದು).

ಆ) ಪೋಲೀಸ್ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲು ಸರ್ಕಾರದವರು ರೂಪಿಸಿರುವ ಷರತ್ತುಗಳೇನು ?